<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ</u>

<u>ಸಿ.ಸಿ.ಸಂಖ್ಯೆಃ **1512/2024**</u>

<u>ಫಿರ್ಯಾದಿ</u> : ಶ್ರೀ ಕಾಲಭೈರವೇಶ್ವರ ವಿವಿದೋದ್ದೇಶ
ಸಹಕಾರ ಸಂಘ ಲಿಮಿಟೆಡ್,
ಮೂಡಿಗೆರೆ ಶಾಖೆ, ಬೇಲೂರು ರಸ್ತೆ,
ಮೂಡಿಗೆರೆ, ಇದರ ಪರವಾಗಿ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಶ್ರೀ ಕೌಶಿಕ್ ಟಿ.ಪಿ,.

ವಿರುದ್ಧ

<u>ಆರೋಪಿ</u> : ಶ್ರೀ ಮಹೇಶ್.ಬಿ.ಎಸ್,
ವಯಸ್ಸು ಸುಮಾರು 38 ವರ್ಷ,
ಬಿನ್ ಸಿದ್ಧಯ್ಯ, ವಾಸಃ ಬಿನ್ನಡಿ ಗ್ರಾಮ,
ಕೊಟ್ಟಿಗೆಹಾರ ಅಂಚೆ, ಮೂಡಿಗೆರೆ ತಾಲ್ಲೂಕು.

<u>ಆಪಾದನೆಯ ಸಾರಾಂಶ</u>

ಶ್ರೀ ವಿಶ್ವನಾಥ್ ಎ., ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ, ಆದ ನಾನು ಆರೋಪಿಯಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆಃ-

ಆರೋಪಿಯಾದ ನೀವು ಫಿರ್ಯಾದಿಯ ಸಹಕಾರ ಸಂಘದ ಸದಸ್ಯರಾಗಿದ್ದು, ನಿಮ್ಮ ಹಣದ ಅವಶ್ಯಕತೆಗಳಿಗೋಸ್ಕರ ಅವರಿಂದ ದಿನಾಂಕಃ 17.12.2020 ರಂದು 1,30,000/- ರೂಪಾಯಿಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲದ ಮರುಪಾವತಿಗಾಗಿ ನಿಮ್ಮ ಖಾತೆ ಹೊಂದಿರುವ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ಬಣಕಲ್ ಶಾಖೆಯ ಚೆಕ್ ಸಂಖ್ಯೆಃ 927563, ದಿನಾಂಕ03.06.2024, ರೂ.1,48,893/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ ಅನ್ನು ಫಿರ್ಯಾದಿಯು ಸಿಡಿಸಿಸಿ ಬ್ಯಾಂಕ್ ಲಿಮಿಟೆಡ್, ಮೂಡಿಗೆರೆ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ, ನಿಮ್ಮ ಖಾತೆಯಲ್ಲಿ ಖಾತೆ ಮುಚ್ಚಲಾಗಿದೆ (Account Closed) ಎಂದು ಹಿಂಬರಹ ನೀಡಿದ್ದು ಇರುತ್ತದೆ. ಕಾರಣ, ಫಿರ್ಯಾದಿಯು ದಿನಾಂಕ 02.07.2024 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದರೂ ಸಹ ನೀವು ಹಣವನ್ನು ವಾಪಸ್ ಮಾಡಿರುವುದಿಲ್ಲ. ಈ ರೀತ್ಯಾ ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಕಲಂ **138** ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವಿರಿ ಎಂದು ಆಪಾದಿಸಲಾಗಿದೆ**?**

ಪ್ರಃ 1. ಈಗ ಮೇಲೆ ಓದಿ ಹೇಳಿದ ಆಪಾದನೆಯನ್ನು ಕೇಳಿದ್ದೀರಾ**?** ಅದು ನಿಮಗೆ ಅರ್ಥವಾಯಿತೇ**?**

ಆರೋಪಿಯ ಉತ್ತರಃ

ಪ್ರಃ 2. ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ**?**

ಆರೋಪಿಯ ಉತ್ತರಃ

**(**ಆರೋಪಿಗೆ ದಿನಾಂಕ 04.02.2025 ರಂದು ಆಪಾದನೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ**,** ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು**.** ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ**)**

**Sd/-**

ಮೂಡಿಗೆರೆ
ದಿನಾಂಕಃ 04.02.2025

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ**.**ಎಂ**.**ಎಫ್**.**ಸಿ**,** ಮೂಡಿಗೆರೆ**.**